(SRI H. M. CHANNABASAPPA)

The Tungabhadra Board was therefore, requested to continue the medical facilities to others till the State Government is able to take a final decision about providing alternative medical facilities for such of these persons who are not employees of the Board or of the State Govrnment. They have extended the facilities upto 31st March 1974.

The Secretary, Tungabhadra Board has been requested to continue the medical facilities even beyond 31st March 1974.

Message of thanks from the Governor
Announcement

MADAM SPEAKER.—I have receieved a message from the Governor which reads as follows :

> "To the Members of the Legislative Assembly, I have received with great satisfaction the expression of your thanks for the speech with which I opened the First Session 1974 of the Karnataka Legislature."

Student's Agitation at Gujarat

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಗುಜರಾತಿನಲ್ಲಿ ಬ್ರಷ್ಟಾಚಾರದ ವಿರುದ್ಧ ಮತ್ತು ಪ್ರಜಾಪ್ರಭುತ್ವದ ಉಳುವಿಗಾಗಿ ವಿದ್ಯಾರ್ಥಿಗಳು, ಯುವಜನರು ಹಾಗೂ ಜನತೆ ದೊಡ್ಡ ಹೋರಾಟ ಮಾಡಿ ಯಶಸ್ವಿಯಾಗಿದ್ದಕ್ಕಾಗಿ ಗುಜರಾತು ವಿದ್ಯಾರ್ಥಿಗಳನ್ನು ಅಭಿನಂದಿಸುತ್ತೇವೆ ಎಂದು ಈ ಸಭೆ ನಿರ್ಣಯ ಮಾಡಬೇಕೆಂದು ಹೇಳುತ್ತೇನೆ. ಇದು ನಮ್ಮ ರಾಷ್ಟ್ರಕ್ಕೆ ಸಂಬಂಧಪಟ್ಟದ್ದು ಮತ್ತು ನಮಗೂ ಸಂಬಂಧಪಟ್ಟದ್ದು. ಅದೇ ರೀತಿ ಬಿಹಾರ ವಿದ್ಯಾರ್ಥಿಗಳಿಗೆ ನಮ್ಮ ಶುಭಾಶಯಗಳನ್ನು ಸಲ್ಲಿಸಬೇಕು.

Bye-elections at Mysore and arrest of students

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಕರ್ನಾಟಕದ ಮಂತ್ರಿಗಳೆಲ್ಲರೂ ಅಧಿವೇಶನ ಬಿಟ್ಟು ಮೈಸೂರಿನಲ್ಲಿ ಮನೆ ಮನೆಗೆ ಹೋಗಿ, ಅಲ್ಲಿ ಅಲೆದು ಈಗ ತಲೆ ಮೇಲೆ ಕೈ ಇಟ್ಟುಕೊಂಡು ವಾಪಸು ಬಂದಿದ್ದಾರೆ. ಸರ್ಕಾರದವರು ರಾಜೀನಾಮೆ ಕೊಡಬೇಕು ಎಂದು ತಾವು ಆದರೂ ಅವರಿಗೆ ಹೇಳಬೇಕು. ಅವರು ತಮ್ಮ ಗೌರವ ಉಳಿಸಿಕೊಳ್ಳಬೇಕಾದರೆ ರಾಜೀನಾಮೆ ಕೊಡಬೇಕು. ಜನ ಅವರ ವಿರುದ್ಧ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಆದುದರಿಂದ ಈ ಸರ್ಕಾರ ಮುಂದುವರಿಯುವುದಕ್ಕೆ ಏನೇನೂ ಆಧಾರವಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಅದನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಕೃಷ್ಣರಾಜಪೇಟೆಯ ಜನ ಅವರ ಬಗ್ಗೆ ಹೇಳಿದ್ದಾರೆ, ಗುಜರಾತನ್ನು ಕರ್ನಾಟಕ ಅನುಸರಿಸುವ ಕಾಲ ಬಹಳ ದೂರ ಇಲ್ಲ ಗುಜರಾತಿನ ಜನತೆಯನ್ನು ಅಭಿನಂದಿಸಬೇಕಾದುದು ಅತ್ಯವಶ್ಯಕ. ಬಿಹಾರ ವಿದ್ಯಾರ್ಥಿಗಳಿಗೂ ಕೂಡ ಶುಭಾಶಯಗಳನ್ನು ತಿಳಿಸಬೇಕಾದುದು ಅತ್ಯವಶ್ಯಕ. ಬಿಹಾರ್‌ನಲ್ಲಿ ಆದ ಹಾಗೆ ಮಂತ್ರಿಗಳಿಗೆ ಇಲ್ಲಿಯೂ ಆಗುತ್ತದೆ. ಇಲ್ಲಿ ಇರತಕ್ಕ ಜನರು ಅವರಿಗೆ ತಕ್ಕ ಬುದ್ಧಿಯನ್ನು ಕಲಿಸುತ್ತಾರೆ

ಅಧ್ಯಕ್ಷರು.—ಒಂದು ಸಾರಿ ಹೇಳಿದ ಮೇಲೆ ಅದು ಮುಗಿದು ಹೋಯಿತು, ಮತ್ತೆ ಮತ್ತೆ ಹೇಳಿದ್ದನ್ನೇ ಹೇಳುವುದು ಚೆನ್ನಾಗಿ ಕಾಣಿಸುವುದಿಲ್ಲ.

† **ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).**—ಈ ಸಂದರ್ಭದಲ್ಲಿ ಒಂದು ವಿಚಾರ ಮಾತ್ರ ತಮ್ಮ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಚುನಾವಣೆಗಳ ಫಲಿತಾಂಶ ಏನೇ ಇರಲಿ, ಅದು ಸರ್ಕಾರಕ್ಕೆ ಬಿಟ್ಟುಬಿಟ್ಟ ವಿಷಯ, ರಾಜೀನಾಮೆ ಕೊಡಬೇಕೆಂದು ಹೇಳಿದರು, ಅದನ್ನು ನಾನು ಹೇಳುವುದು ಸರಿಯಾದುದು ಅಲ್ಲ. ಇಡೀ ರಾಷ್ಟ್ರದಲ್ಲಿ ಉಂಟಾಗಿರತಕ್ಕ ವಾತಾವರಣ ತಮಗೆ ಗೊತ್ತಿದೆ. ಆ ವಾತಾವರಣವನ್ನು ದುರುಪಯೋಗಪಡಿಸಿಕೊಂಡು ಯಾವ ಜನಾಂಗವನ್ನು ಕೆರಳಿಸತಕ್ಕ ಮಾತನ್ನು ಈ ಸಭೆಯಲ್ಲಿ ಆಡುವುದಕ್ಕೆ ಹೋಗುವುದಿಲ್ಲ. ಸರ್ಕಾರಕ್ಕೆ ಒಂದು ಗಂಭೀರವಾದ ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಯಾವ ಜನಾಂಗವನ್ನು ಹತ್ತಿಕ್ಕುವಂತಹ ಕೆಲಸವನ್ನು, ಪೋಲೀಸಿನವರ ಮುಖಾಂತರ ಮಾಡಿಸಲಿಕ್ಕೆ ಹೋಗಬಾರದು. ನೆನ್ನೆ ಈ ವಿಷಯ ಪ್ರಸ್ತಾಪ ಮಾಡಬೇಕು ಎಂದು ಇದ್ದೆ. ಆದರೆ ಫೈನಾನ್ಸ್ ಮಿನಿಸ್ಟರ್‌ರವರ ಉತ್ತರಕ್ಕೆ ಅಡ್ಡಿ ಆಗಬಾರದು ಎಂದು ಮಾತನಾಡಲಿಲ್ಲ. ತಪ್ಪು ಓಟುಗಳನ್ನು ಮಾಡಲಿಕ್ಕೆ ಪ್ರಯತ್ನ ಪಟ್ಟರು ಎಂದು 13 ಜನ ವಿದ್ಯಾರ್ಥಿಗಳನ್ನು ಅರೆಸ್ಟ್ ಮಾಡಿದ್ದಾರೆ. ಅದು ಏನೇ ಇರಲಿ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬಹುದು. ಆದಕ್ಕೆ ನಾನು ಯಾವುದೇ ತರಹ ಬೆಂಬಲ ಸೂಚಿಸುವುದಕ್ಕೆ ಹೋಗುವುದಿಲ್ಲ, ಕಾನೂನು ರೀತ್ಯ it is a bailable offence ಸಂಜೆ ಐದೂವರೆ ಗಂಟೆ ಆದ ಮೇಲೆ ಇದರ ಬಗ್ಗೆ ನನಗೆ ದೂರು ಬಂತು, ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ಫೋನ್ ಮಾಡಿ ಹೇಳಿದೆ. ಕೇಸ್ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಕಾನೂನು ಪ್ರಕಾರ ಬೇಲ್ ಮೇಲೆ ಬಿಡಿರಿ ಎಂದು. ಕಾನೂನು ಬಿಟ್ಟು ಹೋಗಿ ಎಂದು ಹೇಳಲಿಲ್ಲ. ರಾತ್ರಿ ಹತ್ತು ಗಂಟೆಯವರೆಗೆ ಆ ಮಕ್ಕಳನ್ನು ಬಿಡಲಿಲ್ಲ. ಅವರಿಗೆ ಬೆಳಿಗ್ಗೆ ಎಕ್ಸಾಮಿನೇಷನ್ ಇದೆ. ನಾನು ಪೋಲೀಸ್ ಸ್ಟೇಷನ್‌ಗೆ ಹೋಗಿ ಧರಣಿ ಕೂತುಕೊಳ್ಳಬೇಕಾಗಿ ಬಂತು. ಎರಡು ಸಾವಿರ ವಿದ್ಯಾರ್ಥಿಗಳು ಪೋಲೀಸ್ ಅಧಿಕಾರಿಗಳ ಮೇಲೆ ಪ್ರತಿಭಟನೆ ಮಾಡಬೇಕೆಂದು. ಪೋಲೀಸ್ ಸ್ಟೇಷನ್ ಮುಂದೆ ಹೋದಾಗ ಫೈರಿಂಗ್ ಆಗುವ ಸ್ಥಿತಿ ಬಂತು. ನಾನು ಸರ್ಕಾರಕ್ಕೆ ತಿಳಿಸುತ್ತೇನೆ, ಚುನಾವಣೆಯಲ್ಲಿ ಗೆಲ್ಲುವುದು, ಸೋಲುವುದು ಜನತೆಗೆ ಬಿಟ್ಟಿರುವುದು, ಅಧಿಕಾರಿಗಳು ಯಾವುದೇ ಕಾರ್ಯವನ್ನು ನಡೆಸತಕ್ಕ ಕಾಲದಲ್ಲಿ ವಿವೇಚನೆ ಇಲ್ಲದೆ ಅವರು ವರ್ತಿಸಿದರೆ ಅವರ ಕುತ್ತು ನಿಮಗೆ ಬರುತ್ತದೆ. ನಾನು ಸೆಂಟ್ರಲ್ ಪೋಲೀಸ್ ಸ್ಟೇಷನ್ ಮುಂದೆ ಧರಣಿ ಕೂತುಕೊಳ್ಳಬೇಕಾಗಿ ಬಂದಾಗ, ನನಗೆ ಕುರ್ಚಿ ಕೊಡುವುದಕ್ಕೆ ಬಂದರು, ನಾನು ನಣ್ಣ ಮಾನುಷ್ಯ ಕುರ್ಚಿ ಬೇಕಾಗಿಲ್ಲ ಅಂದೆ. It is a bailable offence ಎಂದು ಹೇಳಿದೆ. ಇವೊತ್ತು ಹತ್ತು ಕಾಲು ಗಂಜೆನರೆಗೆ ಮಕ್ಕಳನ್ನು ಹತ್ತಿಕ್ಕುವ ಪ್ರವೃತ್ತಿಯನ್ನು ನಡೆಸಿದ್ದಾರೆ. ನಾನು ಸೌಮ್ಯತೆಯಿಂದ ವರ್ತನೆ ಮಾಡಬೇಕು ಎಂದು ಪ್ರಯತ್ನ ಪಟ್ಟಿದ್ದೇನೆ. ವಿಕೋಪದಿಂದ ಹೇಳುತ್ತೇನೆ, ತಾಳ್ಮೆಯನ್ನು ಮೀರಿ ಹೇಳುತ್ತೇನೆ. ರಾಜ್ಯದಲ್ಲಿ ಮೂರು ವರ್ಷ ಅಧಿಕಾರ ನಡೆಸಿಕೊಂಡು ಹೋಗಿ, ಅದಕ್ಕೆ ನಮ್ಮ ವಿರೋಧವಿಲ್ಲ, ನಿಮ್ಮ ತಪ್ಪುಗಳಿಂದ ನೀವೇ ಬಿದ್ದು ಹೋದರೆ ಅದಕ್ಕೂ ನಮಗೂ ಸಂಬಂಧವಿಲ್ಲ. ನೀವು ಅಧಿಕಾರದಲ್ಲಿ ಇರಬೇಕೆಂದು ಆಸೆ ಇದ್ದರೆ ಇನ್ನು ಮೂರು ವರ್ಷ ನಡೆಸಿಕೊಂಡು ಹೋಗಿ, ಆದರೆ ಮಕ್ಕಳನ್ನು ಹತ್ತಿಕ್ಕುವುದಕ್ಕೆ ನಿಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡರೆ, ಗುಜರಾತು, ಬಿಹಾರದಲ್ಲಿ ಆಯಿತು ಕರ್ನಾಟಕದಲ್ಲಿ ಮರುಕಳಿಸುವುದಕ್ಕೆ ಬಹಳ ದಿವಸ ಇರುವುದಿಲ್ಲ ಎಂದು ಗಂಭೀರವಾಗಿ ಸೂಚನೆ ಕೊಡುತ್ತೇನೆ. ನಾನು ಎಸ್.ಪಿ.ಯವರಿಗೆ ಫೋನ್ ಮಾಡಿ ಹೇಳಿದೆ, ಅವರು ಐ.ಪಿ.ಎಸ್. ಪರೀಕ್ಷೆ ಪಾಸು ಮಾಡಿದ್ದೇನೆ ಎಂದು ಜಂಬದಿಂದ, even if the President of India phones, I don't care ಎಂದು ಕೇಳಿದರು. After all he is the servant of the State. ಎಸ್. ಪಿ. ಈ ಮಟ್ಟಕ್ಕೆ ಹೋಗುವುದು ಸರಿಯಲ್ಲ. ನಾನು ಒಂದು ಸೂಚನೆ ಕೊಡುತ್ತೇನೆ. ಸರ್ಕಾರಿ ಅಧಿಕಾರಿಗಳಿಗೆ ತಿಳಿಸಿ, ತಪ್ಪು ಆದರೆ ಕ್ರಮ ತೆಗೆದುಕೊಳ್ಳುವುದು ಬೇರೆ ವಿಚಾರ ಅವರ ಮೇಲೆ ಕೇಸ್ ಹಾಕಿ ; ಆದರೆ ಬೆಳಿಗ್ಗೆ ಪರೀಕ್ಷೆ ಮಕ್ಕಳನ್ನು ಬೇಲ್ ಮೇಲೆ ಬಿಡಿ ಎಂದರೆ ಆ ರೀತಿ ಉದ್ದಟತನದಿಂದ ನಡೆಯುವುದು ಸರಿಯಲ್ಲ. ನಾನು ರಾಜಕೀಯ ಜೀವನದಲ್ಲಿ ಪ್ರತಿಷ್ಠೆಯನ್ನು ಬೆಳೆಸುವುದಕ್ಕೆ ಹೋಗುವುದಿಲ್ಲ. ಆದರೆ, ಪ್ರಜಾತಂತ್ರದಲ್ಲಿ ಯಾವ ದೊಡ್ಡ ಮಟ್ಟದ ಅಧಿಕಾರಿಯೇ ಇರಲಿ ಸೂಪರ್ ಟ್ಯೂಂ ಸ್ಟೈಲಿನ ಐ.ಎ.ಎಸ್. ಅಧಿಕಾರಿಯೇ ಇರಲಿ, ಜನತೆಯ ಅಭಿಪ್ರಾಯಕ್ಕೆ ಮಣಿದು ಕೆಲಸ ಮಾಡಬೇಕು. ಇನ್ನಾದರೂ, ಅಧಿಕಾರಿಗಳ ಅಹಂಭಾವವನ್ನು ತಗ್ಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಮಕ್ಕಳನ್ನು ಆ ಮಟ್ಟದಲ್ಲಿ ಪರಿಗಣನೆ ಮಾಡುವುದು ಉಚಿತವೆಲ್ಲವೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

† ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಬಹಳ ಸಂತೋಷ, ನಮ್ಮ ವಿರೋಧ ಪಕ್ಷದ ನಾಯಕರು ಬಹಳ ಸಂಯಮದಿಂದ, ರಚನಾತ್ಮಕವಾಗಿ ಮಾತನಾಡಿದ್ದಾರೆ. ಯುವಕರನ್ನು ಮುಂದೆ ತಳ್ಳತಕ್ಕದ್ದು, ಅಡ್ಡದಾರಿಗೆ ಎಳೆಯತಕ್ಕದ್ದು ಇಡೀ ದೇಶಕ್ಕೆ ಕಲ್ಯಾಣವಲ್ಲ ಎಂದು ಅವರು ಹೇಳಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಯುವಕರನ್ನು ಅಡ್ಡದಾರಿಗೆ ಹಾಕಬಾರದು ಎನ್ನುವುದು ನಮ್ಮ ಅಭಿಪ್ರಾಯ.

ಅಧ್ಯಕ್ಷರು.—ನಾನು ಸ್ವಲ್ಪ ಕಟುವಾಗಿ ಕೊತನಾಡಬೇಕಾಗುತ್ತದೆ. ಇಲ್ಲಿ ಇರುವುದಕ್ಕಿಂತ ಕ್ರಿಕೆಟ್ ಮ್ಯಾಚನ್ನು ನೋಡುವುದಕ್ಕೆ ಹೋದರೆ ಚೆನ್ನಾಗಿರುತ್ತದೆ. ಕಾಮೆಂಟರಿ ಅಲ್ಲಿ ಬಹಳ ಚೆನ್ನಾಗಿರುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಡಳಿತದಲ್ಲಿ ಯಾರೇ ಇರಲಿ, ಪರಿಶುದ್ಧವಾಗಿ ನಿಯಮಗಳ ಪ್ರಕಾರ ನಡೆಯಬೇಕಾದ ಅವಶ್ಯವಿದೆ. ನಿಯಮಕ್ಕೆ ವಿರುದ್ಧವಾಗಿ ಯಾರಿ ಅಧಿಕಾರಿಯೇ ನಡೆದು ಕೊಂಡಿರಲಿ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಕೂಡದು ಎನ್ನತಕ್ಕಂಥದ್ದು ಸರ್ಕಾರದ ಧೋರಣೆಯಲ್ಲ. ಈಗ ಮಾನ್ಯ ದೇವೇಗೌಡರು ಅಥವಾ ಯಾರೇ ಆಗಲೀ, ನಿಯಮಕ್ಕೆ ವಿರುದ್ಧವಾಗಿ ಯಾರೇ ಅಧಿಕಾರಿಗಳು ಆಗಲೀ, ಪೊಲೀಸರು ಆಗಲಿ, ಬೇರೆ ಡಿಪಾರ್ಟ್‌ಮೆಂಟಿನವರು ಆಗಲೀ, ಹೀಗೆ ನಡೆದಿದ್ದಾರೆಂದು ಗಮನಕ್ಕೆ ತಂದಿದ್ದೇ ಆದರೆ ಅವರ ಮೇಲೆ ಸೂಕ್ತ ಕಾರ್ಯಕ್ರಮವನ್ನು ಸರ್ಕಾರ ನಿರ್ದಾಕ್ಷಿಣ್ಯವಾಗಿ ತೆಗೆದುಕೊಳ್ಳುತ್ತದೆಂದು ಇಷ್ಟೂ ಪಾತ್ರ ಭರವಸೆ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಹೋದರೆ ನೀವು ಸುರಕ್ಷಿತವೆಂಬಿರುವುದಿಲ್ಲ.

Sri H. M. CHANNABASAPPA.—This is not the way of functioning in a Legislature. I welcome all constructive suggestions and assure the House that we take action against all erring officers, whoever it may be.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಪ್ರಜಾಪ್ರಭುತ್ವ ನಿಯಮಗಳನ್ನು ಸ್ವಲ್ಪ ರಾಜಕೀಯ ಮಾಡಿದ್ದರೆ ಖಂಡಿತ ಹೇಳುತ್ತಿದ್ದೀರಿ ಆದರೆ ಚುನಾವಣೆಗೆ ಹೋಗಿ ಬಂದಿದ್ದೀರಿ. ಆದುದರಿಂದ ಆ ಮಾತನ್ನು ಹೇಳುವ ಅವಶ್ಯ ಇರಲಿಲ್ಲ.

Sri H. M. CHANNABASAPPA.—That is the opinion of the hon. member.

Supply of Milo in Fair Price Shops in Belgaum

Sri B. E. SAYANAK (Belgaum).—Madam Speaker, I have sent a Call Attention Notice yesterday. Government is suppling milo to ration shops and 50 per cent of that milo is nothing but dust. It has to be taken compulsorily by every card holder in Belgaum City. I have a sample of it with me.

MADAM SPEAKER.—It has been sent to Government and let us wait for their reply.

Unsatisfactory Working of the Telephones at the General Hostel

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಜನರಲ್ ಹಾಸ್ಟಲ್‌ನ ಸಂಬಂಧಪಟ್ಟ ವಿಷಯವನ್ನು ಹೇಳುತ್ತೇನೆ. ಅದು ಇಲ್ಲಿಯ ಎಲ್ಲಾ ಸದಸ್ಯರಿಗೂ ಸಂಬಂಧಪಟ್ಟ ಒಂದು ವಿಷಯ, ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಕಳೆದ 4 ದಿವಸಗಳಿಂದ ಜನರಲ್ ಹಾಸ್ಟಲ್‌ನಲ್ಲಿ